ಓ ಎಸ್ ನಂ.107/2024

ಪಿ.ಡಬ್ಲ್ಯೂ-1 ಶ್ರೀಮಂತರಾವ್ ತಂದೆ ಶಿವಪ್ಪ ಬಿರಾದಾರ

**(ಇಂದು ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ಈ ದಾವೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ದಾವಾ ಜಮೀನಿನ ಸರ್ವೆ ನಂಬರ ೧೭ ಇದ್ದು, ಅದು ೨೪ ಎಕರೆ ೬ ಗುಂಟೆ ಇರುತ್ತದೆ. ದಾವಾ ಜಮೀನಿನ ಪೂರ್ವಕ್ಕೆ ಹಳ್ಳ ಇರುತ್ತದೆ. ಪಶ್ಚಿಮಕ್ಕೆ ಕೇಸಾಪೂರ ಗ್ರಾಮದ ಜಮೀನುಗಳು ಬರುತ್ತವೆ, ಉತ್ತರಕ್ಕೆ ನನ್ನ ಕಾಕ ಬಸವಂತರಾಯರವರ ಜಮೀನು ಇರುತ್ತದೆ ಮತ್ತು ದಕ್ಷಿಣಕ್ಕೆ ಅಫಜಲಪೂರ ಘತ್ತರಗಿ ರಸ್ತೆ ಇರುತ್ತದೆ. ೧೯೭೯ ರಲ್ಲಿ ನನಗೆ ಹಗ್ಗದಿಂದ ಅಳತೆ ಮಾಡಿ ಜಮೀನು ಕೊಟ್ಟಿದ್ದರು ಎಂದರೆ ಸರಿ. ಸದರಿ ಅಳತೆಯ ಪ್ರಕಾರ ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ಅಳತೆಯಂತೆ ಪ್ರತಿವಾದಿಯ ಗಂಡ ದೌಲತರಾಯ ಕೂಡಾ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ನಾನು ದಕ್ಷಿಣ ದಿಕ್ಕಿಗೆ ಮತ್ತು ಪ್ರತಿವಾದಿ ಗಂಡ ಉತ್ತರ ದಿಕ್ಕಿಗೆ ಇರುತ್ತೇವೆ ಎಂದರೆ ಸರಿ. ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿಯ ಜಮೀನಿಗೆ ದಾರಿ ಇರುತ್ತದೆ ಎಂದರೆ ಸರಿ.

**[ ಈ ಹಂತದಲ್ಲಿ ವಾದಿಯ ಮಗ ಬಾಗಪ್ಪ ಸಾಕ್ಷಿಗೆ ಸಹಿ ಮಾಡಬೇಡ ಏನು ಹೇಳಬೇಡ ಬಾ ಎಂದು ಕೂಗಿ-ಕೂಗಿ ಹೇಳಿರುತ್ತಾರೆ. ]**

೨. ನನ್ನ ಮತ್ತು ಪ್ರತಿವಾದಿ ನೀಲಮ್ಮರವರ ಹೆಸರು ಇಲ್ಲಿಯವರೆಗೆ ಜಂಟಿಯಾಗಿರುತ್ತದೆ. ಕಲ್ಯಾಣಿ ಮತ್ತು ಪ್ರತಿವಾದಿಯ ಗಂಡ ದೌಲತರಾಯ ಇಬ್ಬರು ಅಣ್ಣತಮ್ಮಂದಿರಾಗಿರುತ್ತಾರೆ. ಅವರಿಬ್ಬರು ಈಗ ಮೃತರಾಗಿರುತ್ತಾರೆ. ದಾವಾ ಜಮೀನಿನ ಉತ್ತರ ದಿಕ್ಕಿನಲ್ಲಿರುವ ಜಮೀನಿನ

ಸಾಗುವಳಿಯನ್ನು ಕಲ್ಯಾಣಿ ಮತ್ತು ದೌಲತರಾಯರವರ ಮಕ್ಕಳು ಮಾಡುತ್ತಾರೆ ಎಂದರೆ ಸರಿ. ಕಲ್ಯಾಣಿ ಮತ್ತು ದೌಲತರಾಯರವರ ಮಕ್ಕಳೂ ಕೂಡಾ ಪಾಲು ಮಾಡಿಕೊಂಡು ಪಟ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಕಲ್ಯಾಣಿ ಮತ್ತು ದೌಲತರಾಯರವರ ಮಕ್ಕಳು ತಮ್ಮ ಜಮೀನಿನಲ್ಲಿ ಬಾವಿ ಮತ್ತು ಬೋರವೆಲಗಳನ್ನು ಹಾಕಿರುತ್ತಾರೆ ಎಂದರೆ ಸರಿ. ನಮ್ಮ ಜಮೀನಿನ ಮತ್ತು ಕಲ್ಯಾಣಿ ಮತ್ತು ದೌಲತರಾಯರವರ ಜಮೀನಿನ ನಡುವೆ ಬಾಂದಾರ ಇತ್ತು ಎಂದರೆ ಸರಿ. ಸಾಕ್ಷಿಯು ಅದನ್ನು ಈಗ ಒಡೆದು ಹಾಕಿರುತ್ತಾರೆ ಎನ್ನುತ್ತಾರೆ. ಈ ದಾವೆ ಹಾಕಿದ ನಂತರ ನನ್ನ ಮಗನೆ ಸದರಿ ಬಾಂದಾರ ಮೇಲಿನ ಕಂಟಿಗಳನ್ನು ಜೆ ಸಿ ಬಿ ಯಿಂದ ತೆಗೆಸಿರುತ್ತಾರೆ ಎಂದರೆ ಸರಿ. ಕಲ್ಯಾಣಿ ಮತ್ತು ದೌಲತರಾಯರವರು ತಮ್ಮ ಜಮೀನಿನಲ್ಲಿ ಮಣ್ಣು ಹಾಕಿಸಿ, ನೀರಾವರಿ ಮಾಡಿರುತ್ತಾರೆ ಎಂದರೆ ಸರಿ.

೩. ೧೨ ವರೆ ಅಳತೆಯ ಹಗ್ಗದ ಅಳತೆಯ ಜಮೀನನ್ನು ಬಾಂದಾರದಿಂದ ಉತ್ತರ ದಿಕ್ಕಿಗೆ ಕಲ್ಯಾಣಿ ಮತ್ತು ದೌಲತರಾಯರವರಿಗೆ ನೀಡಲಾಗಿರುತ್ತದೆ ಎಂದರೆ ನನಗೆ ನೆನಪು ಇರುವುದಿಲ್ಲ. ನನಗೆ ೧೯೭೯ ರಲ್ಲಿ ೧೦ ವರೆ ಹಗ್ಗದ ಅಳತೆಯ ಜಮೀನನ್ನು ಬಾಂದಾರದಿಂದ ದಕ್ಷಿಣ ದಿಕ್ಕಿಗೆ ನೀಡಿದ್ದರು ಎಂದರೆ ಸರಿ. ಪಹಣಿ ಜಂಟಿಯಾಗಿ ಉಳಿದಿರುವುದರಿಂದ ಜಮೀನನ್ನು ಹೊಡೆಯುವ ಉದ್ದೇಶದಿಂದ ನಾನು ಒಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.